ಅಭಿಪ್ರಾಯವನ್ನು ನಾಳೆ, ನಾಡಿದ್ದರಲ್ಲಿ ತಿಳಿಸಬಹುದು...' ಎನ್ನುತ್ತಾ ವಿಕ್ರಂ ದೇಶಪಾಂಡೆ ಮಾತುಗಳನ್ನು ಮುಗಿಸಿದ್ದರು.

ಎದ್ದು ಹೊರಡುವಾಗ ಭವರ್ ಲಾಲ್ ವಿಕ್ರಂ ದೇಶಪಾಂಡೆಯ ಬಳಿ ಸರಿದು 'ವಿಕ್ರಂ ಸರ್, ನಮ್ಮ ಬಾಕಿಯಿರುವ ಜಿಎಸ್‌ಟಿಯನ್ನು ಕಟ್ಟಿಬಿಡುತ್ತೇವೆ. ನಾವು ಯಾವತ್ತೂ ಬೇಕಾಗಿಯೇ ಟ್ಯಾಕ್ಸನ್ನು ಅವಾಯ್ಡ್ ಮಾಡಿದವರಲ್ಲ. ನೀವು ಯಾವಾಗ ಹೇಳಿದರೆ ಆಗ ನಿಮ್ಮ ಅಧಿಕಾರಿಗಳನ್ನು ಕಂಡು ಕ್ಲಿಯರ್ ಮಾಡಿ ಬಂದುಬಿಡುತ್ತೇವೆ' ಎಂದು ಮುಜುಗರ ಮತ್ತು ಖುಷಿ ಎರಡನ್ನೂ ತುಂಬಿಕೊಂಡು ಹೇಳಿದ್ದ. ವಿಕ್ರಂ ದೇಶಪಾಂಡೆ ನಗುತ್ತಾ 'ಅದರ ಬಗ್ಗೆ ಚಿಂತೆಯೇನೂ ಮಾಡಬೇಡಿ, ಸ್ಮೂತಾಗಿ ಹ್ಯಾಂಡ್ಲ್ ಮಾಡಲಿಕ್ಕೆ ನಮ್ಮ ಜಾಯಿಂಟ್ ಕಮಿಷನರ್‌ಗೆ ಹೇಳ್ತೀನಿ. ಆತ ಸ್ವಲ್ಪ ಆಸೆಬುರುಕ, ಮಿಡ್ಲ್ ಕ್ಲಾಸ್ ಫ್ಯಾಮಿಲಿಯಿಂದ ಬಂದವನು. ಬೇಗ ಸೆಟ್ಲ್ ಆಗೋದಕ್ಕೆ ಆಸೆಪಡ್ತಾ ಇದಾನೆ. ಒಂದಿಪ್ಪತ್ತು ರೂಪಾಯಿ ಕೊಟ್ಬಿಡಿ, ಫುಲ್ ಖುಷ್ ಆಗ್ತಾನೆ' ಎಂದಿದ್ದ. ಗುನ್ನಾಲಾಲ್ 'ಇಪ್ಪತ್ತೇನು ಮೂವತ್ತು ರೂಪಾಯಿಗಳನ್ನೆ ಕೊಡ್ತೀನಿ ಬಿಡಿ ಸರ್' ಎಂದಿದ್ದ ನಗುತ್ತಾ. ಅಲ್ಲಿದ್ದವರಿಗೆಲ್ಲಾ ಒಂದು ರೂಪಾಯಿ ಎಂದರೆ ಒಂದು ಲಕ್ಷ ರೂಪಾಯಿ ಎಂಬ ಗೂಢಾರ್ಥ ತಿಳಿಯದ್ದೇನೂ ಅಲ್ಲ. ಇನ್ನೂ ತುಂಬಾ ಹೈ ಲೆವೆಲ್ ಡೀಲಿಂಗುಗಳಲ್ಲಿ ಒಂದು ರೂಪಾಯಿ ಎಂದರೆ ಒಂದು ಕೋಟಿ ರೂಪಾಯಿ ಎಂಬ ಗೂಢಾರ್ಥವೂ ಉಂಟು. ಸೋನಾಲಾಲ್ ಹೈಸ್ಕೂಲು ಓದುವಾಗ ಡ್ರಗ್ಸ್ ಕೇಸಿನಲ್ಲಿ ಸಿಕ್ಕಿಹಾಕಿಕೊಂಡು ಡಿಸಿಪಿ ಸಾಹೇಬರಿಗೆ ಒಂದು ರೂಪಾಯಿ ಕೊಟ್ಟು ಬಿಡಿಸಿಕೊಂಡು ಬಂದ ಘಟನೆಯ ನೆನಪು ತಟ್ಟನೆ ಗುನ್ನಾಲಾಲನ ಮನದಲ್ಲಿ ತೇಲಿಹೋಗಿತ್ತು!

ಮನೆಗೆ ಹಿಂತಿರುಗಿದ ಗುನ್ನಾಲಾಲ್ ಅಚ್ಚರಿ ಮತ್ತು ಸಂಭ್ರಮದ ಕಡಲಲ್ಲಿ ಮುಳುಗಿದ್ದ. ಆಸ್ಕರ್ ವೈಲ್ಡನಿಗೆ ಬಿಟ್ಟರೆ ವಿಕ್ರಂ ದೇಶಪಾಂಡೆಯ ಸಂಬಂಧ, ಪೂರ್ವಿಕಾಳ ಚೆಲುವು ಮತ್ತು ದೇಶಪಾಂಡೆಯ ಷರತ್ತುಗಳು ಎಲ್ಲರಿಗೂ ಒಪ್ಪಿಗೆಯಾಗಿತ್ತು. ಆಸ್ಕರ್ ವೈಲ್ಡನಿಗೆ ಪೂರ್ವಿಕಾ ದೇಶಪಾಂಡೆ ಮೆಚ್ಚುಗೆಯಾಗಿದ್ದರೂ ಕೂಡಲೇ ಸಾಯಿಪ್ರಭೆ ನೆನಪಾಗಿ ಬೆಚ್ಚಿಬಿದ್ದ. ಆದರೆ ಪೂರ್ವಿಕಾಳೇ ತನ್ನ ಬಗ್ಗೆ ಆಸಕ್ತಿ ವಹಿಸಿರುವುದು ಮತ್ತು ವಿಕ್ರಂ ದೇಶಪಾಂಡೆಯ ಸೆಕ್ಯುಲರ್ ವಿಚಾರಗಳು ಸಮಾಧಾನ ತಂದಿದ್ದವು. ಜೊತೆಗೆ ಎರಡು ತಿಂಗಳ ಕಾಲ ಪೂರ್ವಿಕಾಳೊಂದಿಗೆ ತಿರುಗಾಟ ನೆನಪಿಸಿಕೊಂಡು ಕ್ಷಣ ರೋಮಾಂಚಿತನಾದ. ಕನಸಲ್ಲಿ ಕಾಡುತ್ತಿದ್ದ ಊರ್ಮಿಳಾಳ ಸೊಬಗು, ಸೊಗಸನ್ನು ಪೂರ್ವಿಕಾ ಮೈತುಂಬಿಕೊಂಡಿದ್ದರೂ ಅಹಂ ಮಾತ್ರ ಕಿಂಚಿತ್ತೂ ಇಲ್ಲವೆನಿಸಿತು. ಜೊತೆಗೆ ಪೂರ್ವಿಕಾಳ ಮಂದಸ್ಮಿತ ನೋಟ ಆಸ್ಕರ್ ವೈಲ್ಡನ ಎದೆಯ ಆಳಕ್ಕೆ ಇಳಿದು ಕಚಗುಳಿಯಿಡುತ್ತಿತ್ತು. ಬೆಳಿಗ್ಗೆ ಗುನ್ನಾಲಾಲ್ ಆಸ್ಕರ್ ವೈಲ್ಡನ ರೂಮನ್ನು ಪ್ರವೇಶಿಸಿದಾಗ ಪ್ರಶಾಂತವಾಗಿ ನಿದ್ರಿಸುತ್ತಿದ್ದ. ತನ್ನ ಮೊಮ್ಮಗನಿಗೆ ಪೂರ್ವಿಕಾ ದೇಶಪಾಂಡೆ ಇಷ್ಟವಾಗಿರುವುದು ಅವನ ಪ್ರಶಾಂತವಾದ ಮುಖಮುದ್ರೆಯಿಂದಲೇ ಗುನ್ನಾಲಾಲನಿಗೆ ತಿಳಿದುಹೋಗಿತ್ತು. ಮಗುವಾಗಿದ್ದಾಗಿನಿಂದ ತನ್ನ ನೆರಳಿನಲ್ಲಿಯೇ ಬೆಳೆದಿದ್ದ ಮೊಮ್ಮಗನ ಮನಸ್ಸನ್ನು ಗುನ್ನಾಲಾಲ್ ಕೇವಲ ಅವನ ದೇಹದ ಏರಿಳಿತಗಳಿಂದಲೇ ಗ್ರಹಿಸುವಂತಹವನಾಗಿದ್ದ. ಮಲಗಿದ್ದ ಮೊಮ್ಮಗನ ತಲೆ ನೇವರಿಸಿದಾಗ ಆಸ್ಕರ್ ವೈಲ್ಡ್ ಕಣ್ಣು ಬಿಟ್ಟು ಎದ್ದು ಕೂತು 'ಗುನ್ನಾ ನನಗೆ ಇಷ್ಟವಾಗಿದೆ. ದೇಶಪಾಂಡೆಯವರಿಗೆ ಓಕೆ ಹೇಳಿ ಬಿಡು' ಎಂದ.

ಅಂದು ಹನ್ನೊಂದು ಗಂಟೆಗೆ ಗುನ್ನಾಲಾಲ್ ಸಂದೀಪ್ ಕೊಚಾರನಿಗೆ ಫೋನ್ ಮಾಡಿ ತಮ್ಮ ಒಪ್ಪಿಗೆಯನ್ನು ತಿಳಿಸಿದ್ದ. ಏಕೆಂದರೆ ವಿಕ್ರಂ ದೇಶಪಾಂಡೆ ಪರಿಚಯವಾಗಲು ಮೂಲ ಕಾರಣವಾಗಿದ್ದು ಸಂದೀಪ್ ಕೊಚಾರನೇ. ಗುನ್ನಾಲಾಲ್ ಆ ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದ. ಕೊಚಾರ್ 'ಗುನ್ನಾಲಾಲ್ ಜಿ, ವಿಕ್ರಂ ದೇಶಪಾಂಡೆಗೆ ತಿಳಿಸಿಬಿಡಿ. ಆ ಹುಡುಗಿ ಪೂರ್ವಿಕಾಳ ಜಾತಕವನ್ನು ಅವಳು ಹೈಸ್ಕೂಲು ಸೇರುವಾಗಲೇ ನೋಡಿದ್ದೇನೆ. ಅದೊಂದು ಅದ್ಭುತವಾದ ಜಾತಕ. ಹತ್ತು ಲಕ್ಷ ಹುಡುಗಿಯರ ಪೈಕಿ ಒಬ್ಬಳ ಜಾತಕ ಮಾತ್ರ ಆ ರೀತಿಯದಾಗಿರುತ್ತದೆ. ನಿಮ್ಮ ಹುಡುಗನ ಜಾತಕವೇನೂ ಕಡಿಮೆಯೇನಲ್ಲ. ಎರಡು ತಿಂಗಳು ಅವರು ಒಟ್ಟಿಗೆ ತಿರುಗಲಿ. ಯಾವ ಕಟ್ಟುಪಾಡೂ ಬೇಡ. ಆ ನಂತರ ಇಬ್ಬರ ಜಾತಕಗಳು ಹೊಂದುತ್ತವೆಯೋ ಇಲ್ಲವೋ ನೋಡೋಣ. ಮನಸ್ಸು ದೇಹಗಳು ಪರಸ್ಪರ ಒಪ್ಪಿಕೊಂಡರೆ ಕೆಲವೊಮ್ಮೆ ಸರಿಹೊಂದದ ಜಾತಕಗಳೂ ಕೈಕಾಲು ಮುರಿದುಕೊಂಡು ಸುಮ್ಮನೆ ಕೂರುತ್ತವೆ. ಅವತ್ತು ನಾನು ಹೇಳಿರಲಿಲ್ಲವೆ, ಮನುಷ್ಯರ ಮನಸ್ಸುಗಳಿಗೆ ಮತ್ತು ಅಗಾಧವಾದ ಈ ಸೌರವ್ಯೂಹಕ್ಕೆ ವಾಸ್ತುವನ್ನು ಗುರುತಿಸುವುದಾದರೂ ಹೇಗೆ ಎಂದು. ಇರಲಿ, ವರ್ತಮಾನದಲ್ಲಿ ಸಂಭವಿಸುವ ಪ್ರತಿಕ್ಷಣದ ಘಟನೆಗಳನ್ನು ನಿಯಂತ್ರಿಸುವುದಾದರೂ ಯಾರು? ಹೇಗೆ? ಒಳ್ಳೆಯದು ಘಟಿಸಲೆಂದೇ ಆಶಿಸೋಣ' ಎಂದು ಆ ಕಡೆಯಿಂದ ಶುಭ ಹಾರೈಸಿದ್ದ. ಗುನ್ನಾಲಾಲ್ ಮೆಲ್ಲನೆ 'ಕೊಚಾರ್ ಜಿ. ನಿಮ್ಮ ಉಪಕಾರವನ್ನು ನಾನೆಂದೂ ಮರೆಯಲಾರೆ. ನಮ್ಮ ಗೆಳೆತನದ ಸಂಕೇತವಾಗಿ ನಮ್ಮ ಆಸ್ಕರ್ ಟವರ್ಸ್‌ನಲ್ಲಿ ಮೂರು ಬೆಡ್ ರೂಮುಗಳ ಫ್ಲ್ಯಾಟ್ ಒಂದನ್ನು ತಮಗೆ ಗಿಫ್ಟ್ ಆಗಿ ನೀಡಲು ತೀರ್ಮಾನಿಸಿದ್ದೇನೆ. ದಯಮಾಡಿ ನಿಮಗೆ ಬಿಡುವಾದಾಗ ತಿಳಿಸಿ. ಗಿಫ್ಟ್ ಡೀಡ್ ರಿಜಿಸ್ಟರ್ ಮಾಡಿಸೋಣ' ಎಂದು ವಿನಮ್ರನಾಗಿ ಹೇಳಿದ್ದ.

'ನಿಮ್ಮ ಔದಾರ್ಯಕ್ಕೆ ನಾನು ಋಣಿಯಾಗಿರುತ್ತೇನೆ ಗುನ್ನಾಲಾಲ್ ಜಿ. ಬಿಡುವಾದಾಗ ಫೋನ್ ಮಾಡಿ ಬರುತ್ತೇನೆ. ವಿಕ್ರಂ ದೇಶಪಾಂಡೆಯ ಸಂಬಂಧ ತುಂಬಾ ಒಳ್ಳೆಯದೇ. ಎರಡು ತಿಂಗಳ ನಂತರ ಹುಡುಗ ಹುಡುಗಿಯರಲ್ಲಿ ತೀವ್ರ ಭಿನ್ನಾಭಿಪ್ರಾಯ ಬಂದಲ್ಲಿ ಅದನ್ನು ಮುಂದುವರಿಸುವುದೇನೂ ಬೇಡ. ಆದರೆ ಗೆಳೆತನಕ್ಕೆ ಯಾವ ಭಂಗವೂ ಬರುವುದಿಲ್ಲ. ಇತ್ತೀಚೆಗೆ ಹೈ ಪ್ರೊಫೈಲ್ ಕುಟುಂಬಗಳಲ್ಲಿ ಇಂಥ ಸಂಗತಿಗಳು ಸಾಮಾನ್ಯವಾಗಿವೆ ಮತ್ತು ಬಹುತೇಕ ಯಶಸ್ಸು ಕಾಣುತ್ತಿವೆ. ಇವತ್ತಿನ ದಿನ ಜಗತ್ತಿನಲ್ಲಿ ಮನುಷ್ಯರ ಸಂಬಂಧಗಳ ಹೊಂದಾಣಿಕೆಯಲ್ಲಿ ಮುಖ್ಯ ಪಾತ್ರ ವಹಿಸುತ್ತಿರುವುದು ಹಣವೇ. **Money is ruling human relations.** ನಿಮ್ಮ ಪ್ರಕರಣದಲ್ಲಿ ಒಳ್ಳೆಯದನ್ನೇ ಆಶಿಸೋಣ' ಎಂದು ಸಂದೀಪ್ ಕೊಚಾರ್ ಮಾತು ಮುಗಿಸಿದ್ದ. ಗುನ್ನಾಲಾಲ್ ಮರುಕ್ಷಣವೇ ವಿಕ್ರಂ ದೇಶಪಾಂಡೆಗೆ ಫೋನ್ ಮಾಡಿ ಒಪ್ಪಿಗೆಯನ್ನು ತಿಳಿಸಿದ. ಆ ಕ್ಷಣ ಎರಡೂ ಕುಟುಂಬಗಳ ಸದಸ್ಯರ ಮೊಬೈಲ್ ಫೋನ್ ನಂಬರುಗಳು ಪರಸ್ಪರ ಹಂಚಿಕೆಯಾಗಿದ್ದವು. ಎಲ್ಲರೂ ನಂಬರುಗಳಿಗೆ ಹೆಸರುಗಳನ್ನು ಫೀಡ್ ಮಾಡಿಕೊಂಡಿದ್ದರು.

* * *

ಶನಿವಾರ ಮಧ್ಯಾಹ್ನ ಮೋಡ ಕವಿದ ವಾತಾವರಣ ಆವರಿಸಿಕೊಂಡಿತ್ತು. ಆಸ್ಕರ್ ವೈಲ್ಡನ ಫೋನ್ ರಿಂಗಾಗುವುದರೊಂದಿಗೆ ಸ್ಕ್ರೀನ್ ಮೇಲೆ ಪೂರ್ವಿಕಾಳ ಹೆಸರು ಡಿಸ್‌ಪ್ಲೇ ಆಗುತ್ತಿತ್ತು. 'ಹಲೋ' ಎಂದಿದ್ದ ಮೆಲ್ಲಗೆ ಖುಷಿಯಿಂದ ಆಸ್ಕರ್ ವೈಲ್ಡ್. ಮೊದಲ ಫೋನ್ ಸಂಭಾಷಣೆಯಾಗಿದ್ದರಿಂದ ಧ್ವನಿಯಲ್ಲಿ ಕುತೂಹಲ ಮತ್ತು ತುಸು ಆತಂಕ ಎರಡೂ ಮೇಳೈಸಿದ್ದವು.

'ಹಲೋ, ನಾನು ಪೂರ್ವಿಕಾ. ಬೈ ದಿ ಬೈ ನಿನ್ನನ್ನು ಆಸ್ಕರ್ ಎಂದು ಕರೆಯಬೇಕೋ ಇಲ್ಲ ಸೋನಾ ಎಂದು ಕರೆಯಬೇಕೋ' ಕೋಗಿಲೆ ಉಲಿದಂತೆ ಕೇಳಿಬಂದ ಆ ಕಡೆಯ ಮಧುರ ಧ್ವನಿಗೆ ಸಂಪೂರ್ಣವಾಗಿ ಸೋತು ಹೋದ ಆಸ್ಕರ್ ವೈಲ್ಡ್.

'ನಿನಗೆ ಇಷ್ಟವಾದ ಹೆಸರಿನಲ್ಲಿ ಕರೆಯಬಹುದು' ಮಂತ್ರಮುಗ್ಧನಾಗಿ ಹೇಳಿದ್ದ. 'ಸೋನಾ ಎಂದು ಕರೆಯುತ್ತೇನೆ. ನನಗೆ ಅದೇ ತುಂಬಾ ಇಷ್ಟವಾಗಿದೆ' ಮುದ್ದು ಮುದ್ದಾಗಿ ಹೇಳಿದ್ದಳು ಬೆಡಗಿ.

'ಇಟ್ಸ್ ಯುವರ್ ಪ್ಲೆಷರ್. ಅಂಡ್ ಯುವರ್ ಪ್ಲೆಷರ್ ಈಸ್ ಮೈ ಪ್ಲೆಷರ್' ಎಂದು ಖುಷಿಯಿಂದಲೇ ಒಪ್ಪಿದ್ದ ಹುಡುಗ. ತಾನು ಹೆಸರು ಬದಲಾಯಿಸಿಕೊಂಡಿರುವುದು ತನ್ನ ತಾತನ ಮೂಲಕ ಪೂರ್ವಿಕಾಳಿಗೆ ತಿಳಿದಿರಬೇಕೆಂದುಕೊಂಡ.

'ನಾನು ನಿನ್ನ ಕನಸಿನ ಬೆಡಗಿಗಿಂತ ಚಂದವಿಲ್ಲವೇನು?' ಪೂರ್ವಿಕಾಳಿಂದ ಕೂಡಲೇ ಹೊಸ ಪ್ರಶ್ನೆ.

'ಅರೆ, ಯಾವ ಕನಸಿನ ಬೆಡಗಿ?' ತನ್ನನ್ನೇ ತಾನು ಪ್ರಶ್ನಿಸಿಕೊಂಡಂತೆ ಹೊರಬಿದ್ದಿತ್ತು ಉದ್ಗಾರ ಆಸ್ಕರ್ ವೈಲ್ಡನ ಬಾಯಿಯಿಂದ.

'ಅರೆ, ಮರೆತುಬಿಟ್ಟೆಯೇನು? ನಿನ್ನ ಹೆಸರನ್ನೇ ಬದಲಾಯಿಸಿಕೊಳ್ಳಲು ಕಾರಣಳಾದ ನಿನ್ನ ಕನಸಿನ ಹುಡುಗಿಯನ್ನ ನಿನ್ನೊಂದಿಗೆ ನರ್ತಿಸಲು ನಿರಾಕರಿಸಿದ ಬಿನ್ನಾಣದ ಬೆಡಗಿಯನ್ನ' ಪೂರ್ವಿಕಾಳ ಮಾತುಗಳಲ್ಲಿ ಕಾವ್ಯಕನ್ನಿಕೆಯ ನರ್ತನ. ಅರೆ, ಬಾಪ್ರೆ! ಕನಸಿನ ಬಗ್ಗೆ ಇವಳಿಗೆ ವಿವರವಾಗಿ ಹೇಳಿದವರಾರು? ಕ್ಷಣ ಆಸ್ಕರ್ ವೈಲ್ಡನ ಬಾಯಿಂದ ಮಾತು ಹೊರಡದೆ ಬೆರಗಿನಲ್ಲಿ ಮುಳುಗಿದ.

'ಹಾಂ, ವಾರದ ಹಿಂದೆ ಡಾಕ್ಟರ್ ಮನೋರಂಜನಿ ಆಂಟಿ ಸಿಕ್ಕಿದ್ದರು. ನಮ್ಮ ಫ್ಯಾಮಿಲಿಗೆ ಇಪ್ಪತ್ತು ವರ್ಷಗಳಿಂದ ಪರಿಚಯ. ಅಪ್ಪ ಅವರ ಸಂಸ್ಥೆಗೆ ಆಗಾಗ ಬೇಕಾದಷ್ಟು ಫಂಡ್ಸ್ ಡೊನೇಟ್ ಮಾಡ್ತಾ